# PRESS CLIPPINGS

EQUATOR

Full Circle MPR Consulting

Region:

| | | | |
|---|---|---|---|
| Client : | Bangalore Nano 2008 | Lead : | Inaguration of Bangalore Nano |
| Publication : | Praja vani | Date : | 14, Dec, 2008 |
| Section : | Pg-2 | Method : | Conference |




ಬೆಂಗಳೂರಿನಲ್ಲಿ ಶನಿವಾರ ನಡೆದ ಎರಡನೇ ನ್ಯಾನೊ ಸಮ್ಮೇಳನದಲ್ಲಿ ಉಪ ರಾಷ್ಟ್ರಪತಿ ಎಂ.ಹಮೀದ್ ಅನ್ಸಾರಿ ಅವರು ಬೆಂಗಳೂರು ನ್ಯಾನೊ ಘೋಷಣೆಯನ್ನು ಬಿಡುಗಡೆ ಮಾಡಿದರು. ಹಿರಿಯ ವಿಜ್ಞಾನಿ ಪ್ರೊ.ಸಿ.ಎನ್.ಆರ್.ರಾವ್, ರಾಜ್ಯಪಾಲ ರಾಮೇಶ್ವರ ಠಾಕೂರ್, ಗೃಹ ಸಚಿವ ಡಾ.ವಿ.ಎಸ್.ಆಚಾರ್ಯ ಚಿತ್ರದಲ್ಲಿ ಇದ್ದಾರೆ. ಪ್ರಜಾವಾಣಿ ಚಿತ್ರ

# ನ್ಯಾನೊ ವಿಜ್ಞಾನ ಸಂಸ್ಥೆ ಶೀಘ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ 100 ಕೋಟಿ ರೂಪಾಯಿ ವೆಚ್ಚದಲ್ಲಿ ನ್ಯಾನೊ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ.

ನಗರದಲ್ಲಿ ಶನಿವಾರ ನಡೆದ '2ನೇ ಬೆಂಗಳೂರು ನ್ಯಾನೊ 2008' ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿಯವರ ವೈಜ್ಞಾನಿಕ ಸಲಹಾ ಪರಿಷತ್ತಿನ ಅಧ್ಯಕ್ಷ ಪ್ರೊ.ಸಿ.ಎನ್.ಆರ್.ರಾವ್ ಈ ವಿಷಯ ತಿಳಿಸಿದರು.

ಸಂಸ್ಥೆ ಸ್ಥಾಪನೆಗೆ 14 ಎಕರೆ ಜಮೀನನ್ನು ಸರ್ಕಾರ ಮಂಜೂರು ಮಾಡಿದೆ. ನ್ಯಾನೊ ತಂತ್ರಜ್ಞಾನದ ಸಂಶೋಧನೆ ಮತ್ತು ತರಬೇತಿ ನೀಡಲಿದೆ ಎಂದು ಅವರು ಹೇಳಿದರು.

'ಭಾರತದಲ್ಲಿ ಯುವ ಶಕ್ತಿ ಅಪಾರವಾಗಿದೆ. 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಒಟ್ಟು ಜನಸಂಖ್ಯೆಯ ಶೇಕಡಾ 65ರಷ್ಟಿದ್ದಾರೆ. ಆದರೆ ನಗರ ಪ್ರದೇಶಗಳ ಯುವ ಜನತೆ ಐಟಿ, ಬಿಟಿ ಕ್ಷೇತ್ರಗಳಲ್ಲಿ ಮುಳುಗಿ ಕಣ್ಮರೆಯಾಗಿದ್ದಾರೆ. ಗ್ರಾಮೀಣ ಯುವ ಪ್ರತಿಭೆಯನ್ನು ಬಳಸಿಕೊಳ್ಳಬೇಕಾಗಿದೆ' ಎಂದು ಅವರು ಸಲಹೆ ನೀಡಿದರು.

ನ್ಯಾನೊ ರಾಜಧಾನಿ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅನುಪಸ್ಥಿತಿಯಲ್ಲಿ ಅವರ ಪರವಾಗಿ ಭಾಷಣ ಮಾಡಿದ ಗೃಹ ಸಚಿವ ಡಾ.ವಿ. ಎಸ್.ಆಚಾರ್ಯ, 'ನಿಸ್ಸಂದೇಹವಾಗಿ ಬೆಂಗಳೂರು ಐಟಿ, ಬಿಟಿ ರಾಜಧಾನಿ. ಅಷ್ಟೇ ಅಲ್ಲ ನ್ಯಾನೊ ತಂತ್ರಜ್ಞಾನದ ರಾಜಧಾನಿಯೂ ಆಗಿದೆ' ಎಂದರು.

ಕೇಂದ್ರ ಸರ್ಕಾರ ಬೆಂಗಳೂರು, ಕೋಲ್ಕತ್ತ, ಮೊಹಾಲಿ- ಗಳಲ್ಲಿ ನ್ಯಾನೊ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರಿನ ಪಾರಮ್ಯವನ್ನು ಪರಿಗಣಿಸಿಯೇ ಇಲ್ಲಿ ಈ ಸಂಸ್ಥೆಯನ್ನು ಮಂಜೂರು ಮಾಡ ಲಾಗಿದೆ ಎಂದು ಅವರು ಹೇಳಿದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಟ್ಟು 32 ಐಟಿ, ಬಿಟಿ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ.

ಸುಮಾರು 6000 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಗಳಿಂದ 1 ಲಕ್ಷ ಮಂದಿಗೆ ಉದ್ಯೋಗಾವಕಾಶ ಸಿಗಲಿದೆ' ಎಂದು ಅವರು ವಿವರಿಸಿದರು.

'ರಾಷ್ಟ್ರದ ಒಟ್ಟು ಐಟಿ ರಫ್ತಿನಲ್ಲಿ ರಾಜ್ಯದ ಪಾಲು ಶೇ 35ರಷ್ಟಿದೆ. ಅದು ಪ್ರತಿವರ್ಷ ಶೇ 30ರಷ್ಟು ಹೆಚ್ಚಾಗುತ್ತಿದೆ. ಬೆಂಗಳೂರಿನ ಮೂಲ ಸೌಕರ್ಯ ಅಭಿವೃದ್ಧಿಗೆ ಮುಂದಿನ ಮೂರು ವರ್ಷಗಳಲ್ಲಿ 1800 ಕೋಟಿ ರೂಪಾ ಯಿ ವೆಚ್ಚ ಮಾಡಲು ನಿರ್ಧರಿಸಿದೆ. ಐಟಿ, ಬಿಟಿ ಪ್ರಾಧಿಕಾರವನ್ನೂ ರಚಿಸಲಾಗುವುದು' ಎಂದು ಅವರು ಹೇಳಿದರು.

ನ್ಯಾನೊ ತಂತ್ರಜ್ಞಾನ ಆಧಾರಿತ ಸಣ್ಣ, ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೋದ್ಯಮಗಳಿಗೆ ಉತ್ತೇಜನ ನೀಡುವ ಘೋಷಣೆಯನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡ ಲಾಯಿತು.

ಕಾರ್ಯಕ್ರಮದ ನಂತರ ವರದಿಗಾರರೊಂದಿಗೆ ಮಾತನಾಡಿದ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಎ.ಕೆ.ಸೂದ್, 'ಸಾಮಾನ್ಯ ಬಳಕೆಯ ನ್ಯಾನೊ ತಂತ್ರಜ್ಞಾನ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೆಗಳಿಗೆ ಸಾಲ ಸೌಲಭ್ಯವನ್ನು ಕೇಂದ್ರ ಸರ್ಕಾರ ನೀಡಲಿದೆ' ಎಂದರು.